9	5(ಎ), 6(ಬಿ)ಭಾಗಶಃ	ನಂ–2, ಭದ್ರಾ ನಾಲಾ ಉಪ ವಿಭಾಗ, ದಾವಣಗೆರೆ.	9254.91
10	5(ಬಿ)	ನಂ–1, ಭದ್ರಾ ನಾಲಾ ಉಪ ವಿಭಾಗ, ದಾವಣಗೆರೆ.	4904.90
11	6(ಎ)	ನಂ–4, ಭದ್ರಾ ನಾಲಾ ಉಪ ವಿಭಾಗ, ಸಾಸ್ವೆಹಳ್ಳಿ.	6442.00
12	6(ಬಿ)ಭಾಗಶಃ	ನಂ–4, ಭದ್ರಾ ನಾಲಾ ಉಪ ವಿಭಾಗ, ಹರಿಹರ.	892.96
ಒಟ್ಟು			**45469.23**

ಆ) ಭದ್ರಾ ಆಧುನೀಕರಣ ಕಾಮಗಾರಿಗಳು ಕಳಪೆಯಾಗಿರುವ ಬಗ್ಗೆ ಯಾವುದೇ ನಿರ್ದಿಷ್ಟ ದೂರುಗಳು ಬಂದಿರುವುದಿಲ್ಲ.

ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ನ್ಯೂನತೆಗಳು ಕಂಡುಬಂದ ಪ್ರಕರಣಗಳಲ್ಲಿ ಟೆಂಡರ್ ನಿಯಮಾವಳಿಗಳ ಪ್ರಕಾರ ಸಂಬಂಧಪಟ್ಟ ಗುತ್ತಿಗೆದಾರರಿಂದಲೇ ದೋಷಗಳು ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕೆಲಸದಲ್ಲಿ ನಿರ್ಲಕ್ಷತೆ ತೋರಿದ ಕಾರ್ಯಪಾಲಕ ಇಂಜಿನಿಯರ್, ಭದ್ರಾವತಿ ವಿಭಾಗ ಇವರನ್ನು ವರ್ಗಾಯಿಸಲಾಗಿದೆ.

724 ಶ್ರೀ ಮಾರಿಹಾಲ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಐತಿಹಾಸಿಕ ಸ್ಥಳವಾದ ಕಿತ್ತೂರು ಪಟ್ಟಣವನ್ನು ತಾಲ್ಲೂಕನ್ನಾಗಿ ಘೋಷಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ನಿರ್ದಿಷ್ಟ ದಿನಾಂಕ ತಿಳಿಸುವುದು;

ಆ) ಬೆಳಗಾವಿ ಐತಿಹಾಸಿಕ ಅಧಿವೇಶನದಲ್ಲಿ ಮೇ, 2009ರೊಳಗೆ ಕಿತ್ತೂರನ್ನು ತಾಲ್ಲೂಕನ್ನಾಗಿ ಘೋಷಣೆ (ಸಿಹಿ ಸುದ್ದಿ) ಮಾಡುವುದಾಗಿ ಸರ್ಕಾರ ತಿಳಿಸಿದ್ದು ನಿಜವೇ;

ಇ) ನಿಜವಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ), ಆ) ಮತ್ತು ಇ) ಸರ್ಕಾರವು ಶ್ರೀ ಎಂ.ಬಿ.ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ತಾಲ್ಲೂಕು ಪುನರ್ ರಚನಾ ಸಮಿತಿಯು ತನ್ನ

ವರದಿಯನ್ನು ಇತ್ತೀಚೆಗೆ ಸರ್ಕಾರಕ್ಕೆ ಸಲ್ಲಿಸಿರುತ್ತದೆ. ವರದಿಯಲ್ಲಿ ಕಿತ್ತೂರನ್ನು ಕೇಂದ್ರಸ್ಥಾನವನ್ನಾಗಿರಿಸಿ ಹೊಸ ತಾಲ್ಲೂಕನ್ನು ರಚಿಸಬಹುದೆಂದು ಶಿಫಾರಸ್ಸು ಮಾಡಲಾಗಿದೆ. ವರದಿಯು ಸರ್ಕಾರದ ಪರಿಶೀಲನೆಯಲ್ಲಿದ್ದು ಅಂತಿಮ ನಿರ್ಣಯ ತೆಗೆದು ಕೊಳ್ಳಬೇಕಿದೆ.

722 ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲಪ್ರಭಾ ಜಲಾಶಯದ (ಗರಿಷ್ಠ ಮಟ್ಟ 2079.50ಕ್ಕೆ) ಹಿನ್ನೀರಿನಿಂದ ಮುಳುಗಡೆಯಾದ ಕಾದ್ರೊಳ್ಳಿ ಗ್ರಾಮದ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸದರಿ ರೈತರ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಪರಿಹಾರವಾಗಿ ನೀಡುವ ಹಣವೆಷ್ಟು;

ಇ) ರೈತರಿಗೆ ನೀಡುವ ಪರಿಹಾರ ಹಣ ಅತೀ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಸರ್ಕಾರ ಪರಿಹಾರ ಹಣವನ್ನು ಹೆಚ್ಚಿಗೆ ನೀಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಹೌದು.

ಆ) ಕಾದ್ರೊಳ್ಳಿ ಗ್ರಾಮದಲ್ಲಿ ಗರಿಷ್ಠ ಪಾತಳಿಗೆ ಮುಳುಗಡೆಯಾಗತಕ್ಕ ಜಮೀನುಗಳ ಬಗ್ಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿ ಹಂತದಲ್ಲಿದೆ. ಅದರನ್ವಯ ಭೂಸ್ವಾಧೀನ ಕಾಯ್ದೆ ಕಲಂ. 4(1) ರ ಅಧಿಸೂಚನೆಗಿಂತ ಮುಂಚಿನ 3 ವರ್ಷಗಳಲ್ಲಿ ಕಾದ್ರೊಳ್ಳಿ ಗ್ರಾಮದಲ್ಲಿ ಮಾರಾಟವಾದ ಜಮೀನುಗಳ ಅಂಕಿ-ಅಂಶಗಳನ್ನು ಬೈಲಹೊಂಗಲ ಉಪ-ನೋಂದಣಿ ಅಧಿಕಾರಿಗಳು ಪೂರೈಸಿದ್ದು ಅದರನ್ವಯ ಪ್ರತಿ ಎಕರೆಗೆ 38,500/- ರೂ.ಗಳಂತೆ ಮಾರಾಟ ಬೆಲೆ ಆಗುತ್ತದೆ. ಈ ಮೊತ್ತಕ್ಕೆ 30% ಸೊಲೇಶಿಯಂ ಹಾಗೂ 12% ಹೆಚ್ಚುವರಿ ಮಾರುಕಟ್ಟೆ ಬೆಲೆ ಸೇರುತ್ತದೆ.

ಇ) ರೈತರಿಗೆ ನೀಡುವ ಪರಿಹಾರ ಧನವನ್ನು ಕಾನೂನಿನನ್ವಯ ಉಪ-ನೋಂದಣಿ ಅಧಿಕಾರಿಗಳು, ಬೈಲಹೊಂಗಲ ಇವರಿಂದ 4(1) ಅಧಿಸೂಚನೆಯ 3 ವರ್ಷಗಳ ಪೂರ್ವದ ಮಾರಾಟ ಅಂಕಿ-ಅಂಶಗಳ